ಸಿಟ್ಟು ನೆತ್ತಿಗೆ ಹತ್ತಿತು. ಕುಡುಗೋಲಲ್ಲಿ ಬೀಸಬೇಕು ಅನಿಸಿತು. ಕೈ ಕಾಲು ಸಿಟ್ಟಿನಿಂದ ಅದುರತೊಡಗಿದವು.

'ನಿನ್ ತಪ್ಪಲ್ಲ.. ನಿನ್ ಹುಟ್ಟುಸ್ದಳಲ್ಲ ನಿಮ್ ಅವ್ವ ಆಕೀ ತಪ್ಪು. ನಿನ್ ಸಾಯ್ಲೋ ಬದಲು ಆಕೀನ, ನಿನ್ ನೋಡಿ ನಿನ್ ದಾರಿ ಹಿಡಿಯೋ ರಾಜೀನಾ... ಕತ್ತರಿಸಿ ನಾನು ಸತ್ರ ನಿನಗೆ ನೆಮ್ಮದಿ ಅನ್ನುತ್ತೆ...' ಎಂದು ಹೇಳಿ ಭರಮ ಸಿಟ್ಟಿನಿಂದ ಮನೆಯಿಂದ ಹೊರಬಿದ್ದ.

ಸಾಕಮ್ಮ ಅಲ್ಲಿಯೇ ರೆಕ್ಕೆ ಕತ್ತರಿಸಿಕೊಂಡ ಚಿಟ್ಟೆಯಂತೆ ಅದುರತೊಡಗಿದಳು. ಅಪ್ಪಯ್ಯನ ಸಿಟ್ಟು ಅವ್ವನ ಪ್ರಾಣ ತೆಗೆದುಕೊಂಡರೆ ಎಂದು ಭಯವಾಯ್ತು. ಎದ್ದು ಬಾಗಿಲಿಗೆ ಬೀಗ ಬಡಿದು ಉಟ್ಟ ಬಟ್ಟೆಯಲ್ಲೇ ಜೋರು ಜೋರು ನಡೆಯತೊಡಗಿದಳು.

***

ಭರಮ ಸಿಟ್ಟಿನಿಂದ ನಡೆಯುತ್ತಿದ್ದವನು ಒಮ್ಮೆಲೇ ಕುಸಿದು ಕೂತ. ತನ್ನ ಬದುಕು ಕಟ್ಟಿಕೊಳ್ಳಲು ಹೆಣಗಾಡಿದ ಚಿತ್ರಗಳೆಲ್ಲ ನೆನಪಾದವು. ಕಣ್ಣಿನಿಂದ ಧಾರಾಳವಾಗಿ ಕಣ್ಣೀರು ಹರಿದುಹೋಯ್ತು. ತಾಂಡಾದಲ್ಲಿ ಇನ್ನೂ ತಲೆ ಎತ್ತಿ ಓಡಾಡಲು ಅಸಾಧ್ಯ ಎಂದು ನೆನಪಾಗಿ ಕುಗ್ಗಿ ಹೋದ. ಗಟ್ಟಿಯಿಲ್ಲದ ಸಂಪಾದನೆಗೆ ತಾಂಡಾದ ಮಂದಿ ದಂಡದ ಬರಿಯ ಎಳೆದು ಬದುಕು ಅಸಹನೀಯ ಮಾಡುವ ಸೂಚನೆ ಸಿಕ್ಕಿತ್ತು. ಇದೇನೂ ತಾಂಡಾದಲ್ಲಿ ಮೊದಲಲ್ಲ. ತನಗೂ ಈ ಗತಿ ಒದಗಿಬಂತಲ್ಲ ಎಂದು ಸಿಟ್ಟು ಬಂತು. ಮರುಕ್ಷಣದಲ್ಲೇ ಅಸಹಾಯಕತನ ಒತ್ತರಿಸಿ ಬಂತು. ದಂಡ ಒದಗಿಸಲು ಎಷ್ಟೆಲ್ಲ ಕಷ್ಟಪಡಬೇಕು ಎಂದು ನೆನಸಿಕೊಂಡು. 'ಇವನವ್ವನ್ ಎಂತ ಸುಡುಗಾಡು ಬದುಕು' ಎಂದುಕೊಂಡ.

ಸಾಕಮ್ಮ ಅಪ್ಪಯ್ಯನನ್ನು ಹುಡುಕುತ್ತ ಬಂದಾಗ ಭರಮ ಬಿಕೋ ಎನ್ನುತ್ತಿದ್ದ ಬಸ್‌ಸ್ಟಾಪಿನಲ್ಲಿ ಕೂತಿದ್ದ. ಸಾಕಮ್ಮ ಹೋಗಿ ಅವನ ಪಕ್ಕ ಕೂತಳು. ಮಾತುಗಳು ಸಿಗದೇ ಏನು ಮಾತಾಡಬೇಕು ಎಂದು ಸುಮ್ಮನೆ ಇದ್ದಳು. ಭರಮ ಸಾಕಮ್ಮ ಬಂದದ್ದು ಗೊತ್ತಾಗಿ–

ಅಪ್ಪನ ದೌಲತ್ತಿನ ದನಿಯಲ್ಲಿ 'ನಡೀ ಹಟ್ಟಿಕಾ...'

'ಅಪ್ಪಯ್ಯ ಅರ್ಥ ಮಾಡ್ಕಳಿ, ನಂದೀಶ ಇಷ್ಟಪಟ್ಟನಾ, ನಾ ಅವನ ಇಷ್ಟಪಟ್ಟೀನಿ, ನನ್ನ ಚೆನ್ನಾಗಿ ನೋಡ್ಕೋತಾನೇ ಅವನು.'

ಭರಮ ಅವಳ ಮಾತನ್ನು ಒಪ್ಪದೇ ತಲೆಯಾಡಿಸುತ್ತಾ 'ನೀನು ಚೆನ್ನಾಗಿದ್ರೆ ಸಾಕೇನು? ನಮ್ ಮಾನ ಮರ್ವಾದೆ ಮೂರು ಕಾಸ್ ಆದ್ರೂ ಪರ್ವಾಗಿಲ್ವೇನು? ಎದ್ದು ನಡೀ' ಎಂದು ಸಾಕಮ್ಮಳ ಕೈಹಿಡಿದು ದರದರ ಎಳೆದುಕೊಂಡು ಹೋದ. ಸಾಕಮ್ಮಗೆ ನಡೆಯಲಾಗದೆ ಕೆಳಕ್ಕೆ ಬಿದ್ದಳು, ಆದರೂ ಭರಮ ಎಳೆದ, ಸಾಕಮ್ಮಳ ಕಾಲು ತರಚಿಕೊಂಡು ರಕ್ತ ಬಂತು, ಭರಮನಿಗೂ ನಡೆಯಲಾಗದೆ ನಿಂತ.

ಸಾಕಮ್ಮ ಭರಮ ಬಿಸಿಲಲ್ಲಿ ಬೇಯುತ್ತಾ ಖಾಲಿ ರಸ್ತೆಯಲ್ಲಿ ಕೂತಿದ್ದರು. ಸಾಕಮ್ಮಳ ಗಾಯ ಒಣಗಿ ರಕ್ತದ ಕಲೆಗಳು ಉಳಿದುಕೊಂಡಿದ್ದವು. ಅಪ್ಪಯ್ಯನ ಮುಖ ನೋಡಿದಳು. ತುಂಬಾ ಹೊತ್ತು ಹಾಗೆ



ಮಳೆ ಬಿರಿಯಲು
ನೆಲದ ಮೇಲೆ ಪ್ರೀತಿಯಿರಬೇಕು
ಕಣ್ಣೀರು ಒಡೆಯಲೂ
ನೋವ ಮೇಲೆ
ಒಲವಿರಬೇಕು!

–ಅವಿಜ್ಞಾನಿ, ಮಂಗಳೂರು

ಕೂತಿದ್ದರು. ಭರಮ ದಢಾರನೆ ಎದ್ದು ಜೋರು ನಡಿಗೆಯಲ್ಲಿ ಊರಿನ ಹಾದಿ ಹಿಡಿದ, ಸಾಕಮ್ಮ ಅವನು ಕಣ್ಮರೆಯಾಗುವವರೆಗೂ ನೋಡಿ ಕುಂಟುತ್ತಾ ಮನೆ ಕಡೆ ಹೊರಟಳು.

***

ಭರಮ ಸಿಟ್ಟು ಇಳಿಯುವವರೆಗೂ ಜೋರು ಹೆಜ್ಜೆ ಹಾಕುತ್ತಿದ್ದವನು ಸಿಟ್ಟು ಇಳಿದಂತೆ ಮೆಲ್ಲಗೆ ನಡೆಯತೊಡಗಿದ. ಅವನ ಮನಸು ಐದು ವರ್ಷಗಳ ಹಿಂದೆ ನಡೆದ ಸಂಗತಿಗಳನ್ನು ನೆನಪಿಸಿಕೊಳ್ಳುತ್ತಿತ್ತು. ತಾಂಡಾಕ್ಕೊಂದೇ ಕಟಿಂಗ್ ಶಾಪಿತ್ತು. ಅದನ್ನ ನಾಗೇಶಿ ನಡೆಸುತ್ತಿದ್ದ. ಮೂವತ್ತು ದಾಟಿ ಅಪ್ಪ ಅಮ್ಮನನ್ನು ಕಳಕೊಂಡಿದ್ದ ನಾಗೇಶಿಗೆ ಹೆಣ್ಣು ದಿಕ್ಕಿರಲಿಲ್ಲ. ಅದ್ಯಾವ ಮಾಯದಲ್ಲೋ ತಾಂಡಾದ ಕಮಲನ ಮಗಳು ಮೂಗಿ ಇವನ ಪ್ರೇಮಕ್ಕೆ ಬಿದ್ದಳೋ ಗೊತ್ತಿಲ್ಲ. ಅವಳಿಗೂ ಮಾತು ಬಾರದ ಕಾರಣ ಇಪ್ಪತ್ತೈದು ದಾಟಿದ್ದರೂ ಗಂಡು ದಕ್ಕಿರಲಿಲ್ಲ. ಸಿಕ್ಕ ವರರೆಲ್ಲ ಭಾರಿ ವರದಕ್ಷಿಣೆಗೆ ಗಂಟು ಬಿದ್ದ ಕಾರಣ ಹೊಸಲು ಮೇಲೆ ಇಟ್ಟ ಅಕ್ಕಿ ಒದೆಯುವ ಭಾಗ್ಯ ಅವಳಿಗೆ ಸಿಗಲಿಲ್ಲ. ಈ ಮಧ್ಯೆ ಮೂಗಿಗೂ ನಾಗೇಶಿಗೂ ಪ್ರೇಮಾಂಕುರವಾಗಿ ಓಡಿಹೋಗಿದ್ದರು. ಮೂಗಿಯ ಅಪ್ಪ ವಜ್ರಮುನಿಯಂತೆ ಎಗರಾಡಿದ್ದ. ನಾಲ್ಕೈದು ವಾರ ಅಲ್ಲಿ ಇಲ್ಲಿ ತಡಕಾಡಿ ಇಬ್ಬರನ್ನೂ ಕರೆದುಕೊಂಡು ಬಂದಿದ್ದರು.



ತಾಂಡಾದ ದೊಡ್ಡವರಂತೆ ಮೂಗಿ ಮತ್ತು ನಾಗಿಯನ್ನು ಬೇರೆ ಮಾಡಿದ್ದೂ ಆಯಿತು. ನಾಗೇಶಿಗೆ ಅರವತ್ತು ಸಾವಿರ ದಂಡ ವಿಧಿಸಿ ತಾಂಡಾದ ಹೊರಗೆ ಅಂಗಡಿ ಇರಿಸಲಾಯ್ತು. ವಿಷಯ ಎಲ್ಲರಿಗೂ ಗೊತ್ತಿದ್ದ ಕಾರಣ ಮೂಗಿಗೆ ಯಾವ ಗಂಡು ಸಿಗಲಿಲ್ಲ. ಊರ ಜಾತ್ರೆ ದಿನ ಮೂಗಿ ಊರ ಬಾವಿಗೆ ಬಿದ್ದು ಸತ್ತಳು, ನಾಗೇಶಿ ಹುಚ್ಚನಾದ. ಹೋದ ವರ್ಷ ಅವನು ಸತ್ತಾಗ ಅವನಿಗೆ ನಲವತ್ತೊಂದು ವರ್ಷ. ಭರಮನಿಗೆ ಇದೆಲ್ಲ ನೆನಪಾಗಿ ಅನುಭವಿಸಬೇಕಾದ ಅವಮಾನ, ಕಟ್ಟಬೇಕಾದ ದಂಡ ನೆನಪಾಯ್ತು ಸಿಟ್ಟು ಬಂತು, ಅಸಹಾಯಕತೆ ಒದ್ದು ಬಂತು, ತಾಂಡಾಗೆ ಹೋಗದೆ ಅದರ ಹಿಂದಿನಿಂದ ಪೂರ್ವಕ್ಕಿದ್ದ ಹನುಮನ ಬೆಟ್ಟ ಹತ್ತಿದ.

***

ತುಂಬಾ ಹೊತ್ತು ಯೋಚಿಸಿ, ಸುಮ್ಮನಿದ್ರೆ ಮುಕ್ಕಿ ಹರಿಯುತ್ತಾರೆ ಎಂದು, ದಂಡವಾದರೂ ಸರಿ ತಲೆ ಎತ್ತಿಯೇ ಕಟ್ಟಿ ತೀರಬೇಕೆಂದು, ರಾಜೀಯನ್ನು ಚೆನ್ನಾಗಿ ಓದಿಸಿ ಸಿಟಿ ಹುಡುಗನಿಗೆ ಕೊಟ್ಟು, ಈ ತಾಂಡಾದ ಬದುಕಿಗೆ ಸಲಾಂ ಹೊಡೆಯಬೇಕೆಂದು ನಿರ್ಧರಿಸಿ ಎದ್ದ. ಆಗಲೇ ಕತ್ತಲು ಆವರಿಸಿತ್ತು, ಗುಡಿಯ ದೀಪ ಹತ್ತಿತ್ತು. ತಾಂಡಾದ ಮನೆಯ ದೀಪಗಳು ಹತ್ತಿದ್ದವು. ಪಶ್ಚಿಮದ ಕಡೆಯ ಕನಕ ಗುಡ್ಡದ ಸಂತ ಸೇವಾಲಾಲ್ ದೇವಸ್ಥಾನದ ಮುಂದೆ ಧನಪಾಲ ಬಡಿಯುತ್ತ ಹಾಡುತ್ತಿದ್ದ ಭೀಮ ಸತಿಯ ಹಾಡು ತಮಟೆಯ ಸದ್ದು ಬೀಸುವ ಗಾಳಿಯಲ್ಲಿ ತೇಲಿಬಂದು ಬಡಿಯುತ್ತಿತ್ತು.

ಬೆಳಗಿನಿಂದ ಊಟ ಇಲ್ಲದೆ, ಬಿಸಿಲಲ್ಲಿ ತಿರುಗಿ ಮಗಳ ಜೊತೆ ಜೋರುಧ್ವನಿಯಲ್ಲಿ ಜಗಳವಾಡಿಕೊಂಡು ಬಂದು ನಿಂತ ಭರಮನಿಗೆ ತಲೆ ಚಕ್ಕರ್ ಬಂತು. ಸಾವರಿಸಿಕೊಂಡು ನಿಂತ. ಜೋರು ಗಾಳಿ ಬೀಸುತ್ತಿತ್ತು, ಶರೀಫಜ್ಜ ಹಾಡದೆ ತಂಬೂರಿಯನ್ನ ಮೀಟುತ್ತಿದ್ದ, ಅದು ತಾಂಡಾದ ನೋವಿನಂತೆ ಕೇಳಿಸುತಿತ್ತು. ಭರಮ ಎದ್ದು ಹನುಮನ ಪಾದ ಎಂದು ಕರೆವ ಬಂಡೆ ಮೇಲಿನ ಹನುಮ ಪಾದಕ್ಕೆ ತನ್ನ ಕಾಲಿಟ್ಟ. ಅವನ ಪಾದಕ್ಕಿಂತ ಹತ್ತು ಪಾಲು ಹೆಚ್ಚಿತ್ತು, ಭರಮನ ಪಾದ ಬೆಳೆದು ಬೆಳೆದು ದೊಡ್ಡದಾದಂತೆ ಭಾಸವಾಯ್ತು. ಒಂದು ಕ್ಷಣ ತಾನು ಹನುಮನಾದರೆ ಎನಿಸಿತು. ಇಲ್ಲಿಂದ ಹಾರಿ ನೆಮ್ಮದಿಯ ಗೂಡಿಗೆ ಸೇರಬೇಕು ಅನಿಸಿತು. ತನ್ನ ಹಟ್ಟಿಯತ್ತಿರ ಜನರು ಸೇರಿದ್ದು ಇರುವೆಗಳಂತೆ ಕಾಣಿಸಿತು. ಸಾಕಮ್ಮನ ವಿಷಯ ಹರಡಿ ತಾಂಡಾದ ದೊಡ್ಡ ಮಂದಿಯೆಲ್ಲ ನೆರೆದಿರೋದು ಗೊತ್ತಾಯ್ತು.

ಮೆಟ್ಟಿಲು ಇಳಿಯತೊಡಗಿದ, ಇಳಿದಷ್ಟು ಅವನ ಮೈಯಲ್ಲಿ ಕಸುವು ಹೆಚ್ಚಿದಂತೆ ಭಾಸವಾಗುತ್ತಿತ್ತು. ಮೈಯಲ್ಲಿ ಹುಟ್ಟಿದ ಹೊಸ ಶಕ್ತಿ ಯಾವುದು ಗೊತ್ತಾಗದೆ ಮತ್ತಷ್ಟು ಜೋರು ಜೋರು ಇಳಿದ. ತಾಂಡಾದ ದೊಡ್ಡ ಮಂದಿ ದಂಡ, ಬಹಿಷ್ಕಾರ, ಇನ್ನು ದೊಡ್ಡ ದೊಡ್ಡ ಶೋಷಣೆಯ ಪದಗಳನ್ನು ಮನಸಿನಲ್ಲಿ ಮೆದುಳಿನಲ್ಲಿ ನೇಯುತ್ತಾ ಭರಮನಿಗಾಗಿ ಕಾಯುತ್ತಿದ್ದರು.

ಪ್ರತಿಕ್ರಿಯಿಸಿ: **feedback@sudha.co.in**